ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮತ್ತು ಆ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಮೀಟರ್‌ಗಳ ಅಭಾವದಿಂದ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕಾಗಿ ತೊಂದರೆಯಾಗಿರುವುದಿಲ್ಲ. ಆದರೆ ಗೃಹಬಳಕೆ ಸ್ಥಾವರಗಳಿಗೆ ವಿದ್ಯುತ್ ಮೀಟರ್‌ಗಳ ಅಭಾವದಿಂದ ಸ್ವಲ್ಪಮಟ್ಟಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಗೃಹಬಳಕೆಯ ಸ್ಥಾವರಗಳಿಗೆ ಬೇಕಾಗುವ ವಿದ್ಯುತ್ ಮೀಟರ್‌ಗಳನ್ನು ಆದಷ್ಟು ಜಾಗ್ರತೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್ ಮತ್ತು ಹೆಚ್.ಟಿ. ಲೈನ್‌ಗಳನ್ನು ವಿದ್ಯುದೀಕರಣಗೊಳಿಸಲು (ಛಾರ್ಜ್ ಮಾಡಲು) ಸರ್ಕಾರದ ವಿದ್ಯುತ್ ಪರಿವೀಕ್ಷಕರ ಅನುಮತಿ ಬೇಕಾಗಿರುತ್ತದೆ. ಸದರಿಯವರ ಅನುಮತಿ ಪಡೆದು ಇವುಗಳನ್ನು ವಿದ್ಯುದೀಕರಿಸಲು (ಛಾರ್ಜ್ ಮಾಡಲು) ಆದ್ಯತೆ ನೀಡಲಾಗುತ್ತಿದೆ.

ಕುಂದಾಪುರದಲ್ಲಿ ವಿದ್ಯುಚ್ಛಕ್ತಿ ಕಛೇರಿ ತೆರೆಯುವ ಕುರಿತು

4450 - ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೈಂದೂರು ವಿಧಾನ ಸಭಾಕ್ಷೇತ್ರ ಉಡುಪಿಯಿಂದ 80 ಕಿ.ಮೀ. ದೂರವಿದ್ದು ಕುಂದಾಪುರ ತಾಲ್ಲೂಕಿಗೆ ಒಳಪಟ್ಟಿದ್ದಾಗ್ಯೂ ಕೆ.ಇ.ಬಿ. ಉಪ ವಿಭಾಗವನ್ನು ಮಾತ್ರ ಹೊಂದಿರವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ, ಕೆ.ಇ.ಬಿ. ಉಪ ವಿಭಾಗವನ್ನು ವಿಭಾಗೀಯ ಕಛೇರಿ ಆಗಿ ಮಾರ್ಪಡಿಸಿ ಮಂಜೂರು ಮಾಡಲಾಗುವುದೇ?*

ಇ) *ಹಾಗಿಲ್ಲದಿದ್ದಲ್ಲಿ ಇರುವ ತೊಂದರೆಗಳೇನು?*

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು. ಕುಂದಾಪುರ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿರುವ ಹಾಗೂ ಉಡುಪಿಯಿಂದ 80 ಕಿ.ಮೀ. ದೂರದಲ್ಲಿರುವ ಬೈಂದೂರಿನಲ್ಲಿ ನಿಗಮದ ಆದೇಶ ದಿನಾಂಕ 20.9.2000ದಲ್ಲಿ ಬೈಂದೂರು ಶಾಖಾ ಕಚೇರಿ ಮತ್ತು ತಾಲ್ಲೂಕು ಶಾಖಾ ಕಚೇರಿಗಳನ್ನೊಳಗೊಂಡಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಒಂದು ಉಪ ವಿಭಾಗವನ್ನು ತೆರಯಲಾಗಿದೆ.

ಆ) ಮತ್ತು ಇ) ಕುಂದಾಪುರ ಅಥವಾ ಬೈಂದೂರು ಉಪ ವಿಭಾಗಗಳನ್ನು ವಿಭಾಗೀಯ ಕಚೇರಿಯನ್ನಾಗಿ ಮಾರ್ಪಡಿಸುವ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ.

ಮಂತ್ರಿಗಳ ಜಿಲ್ಲಾ ಪ್ರವಾಸ - ಶಿಷ್ಟಾಚಾರ ವ್ಯವಸ್ಥೆ

4451 - ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಮುಖ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂತ್ರಿಗಳು ಜಿಲ್ಲಾ ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ ವಿಶೇಷವಾಗಿ ಕಂದಾಯ*